# <u>ಮುಪ್ಪಿನ ಗಂಡನ ಒಲ್ಲೆನೆ</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchhu Rayaru.
3. **Note:** The Ankita is different in both the books. We have considered book in Ref.1 as standard and taken that Ankita for listing.
4. **Note:** The wordings mentioned without highlights are as per Ref. 1 and the wordings given in yellow highlights are as per Ref. 2. There are few differences in wordings in both these versions.
5. **Note:** The singer has followed the wordings in Ref. 2

ರಾಗ ಆನಂದಭೈರವಿ ಅಟ ತಾಳ

| | |
|---|---|
| ಮುಪ್ಪಿನ ಗಂಡನ ಒಲ್ಲೆನು ನಾನು ‖ ಪ ‖ | ಮುಪ್ಪಿನ ಗಂಡನ ಒಲ್ಲೆನೆ |
| ತಪ್ಪದೆ ಪಡಿಪಾಟ ಪಡಲಾರೆನಕ್ಕ ‖ ಅಪ ‖ | ತಪ್ಪದೆ ಪಡಿಪಾಟ ಪಡಲಾರೆನವ್ವ |
| | |
| ಉದಯದಲ್ಲೇಳಬೇಕು ಉದಕ ಕಾಸಲು ಬೇಕು | ಉದಯದಲೇಳಬೇಕು ಉದಕ ಕಾಸಲು ಬೇಕು |
| ಬದಿಯಲ್ಲಿ ನಾನಿದ್ದು ಬಜೆ ಅರೆಯ ಬೇಕು | ಹದನಾಗಿ ಬಜೆಯನು ಅರೆದಿಡಬೇಕು |
| ಹದನಾಗಿ ಎಲೆ ಸುಣ್ಣ ಅಡಿಕೆ ಕುಟ್ಟಲು ಬೇಕು | ಬದಿಯಲಿ ಎಲೆ ಅಡಿಕೆ ಕುಟ್ಟಿಡಬೇಕು |
| ಬಿದಿರು ಕೋಲನು ಮುಂದೆ ಇಡಬೇಕಕ್ಕ ‖ 1 ‖ | ಬಿದಿರ ಕೋಲು ತಂದು ಮುಂದಿಡಬೇಕು |
| | |
| ಮೆತ್ತನೆ ರೊಟ್ಟಿ ಮುದ್ದೆಯ ಮಾಡಲು ಬೇಕು | ಪಿತ್ತ ವೋಕರಿಕೆ ಮುದುಕರಿಗೆ ವಿಶೇಷವು |
| ಒತ್ತಿ ಒದರಿ ಕೂಗಿ ಕರೆಯಲು ಬೇಕು | ಹೊತ್ತು ಹೊತ್ತಿಗೆ ಜೊಲ್ಲ ಚೆಲ್ಲಬೇಕು |
| ವಾಕರಿಕೆಯು ಮೂಗಿನ ಸಿಂಬಳ | ಮೆತ್ತನವೆರಡು ಮುದ್ದಿಯ ಮಾಡಲುಬೇಕು |
| ಮತ್ತೆ ವೇಳೆಗೆ ಎದ್ದು ತೊಳೆಯಬೇಕಕ್ಕ ‖ 2 ‖ | ಒತ್ತೊತ್ತಿ ಕೂಗಿ ಕರೆಯಲು ಬೇಕು |
| | |
| ಗೋಣಿ ಹಾಸಲುಬೇಕು ಬೆನ್ನ ಗುದ್ದಲು ಬೇಕು | ಜಾಡಿ ಹಾಸಬೇಕು ನೋಡಿ ಬಾಡಬೇಕು |
| ಗೋಣು ಹಿಡಿದು ಮೇಲಕ್ಕೆತ್ತಬೇಕು | ಅಡಿಗಡಿಗೆ ಕಣ್ಣೀರ ಸುರಿಸ ಬೇಕು |
| ಶ್ರೀನಿಧಿ ಪುರಂದರ ವಿಠಲನ್ನ ನೆನೆಯುತ್ತ | ಒಡೆಯ ಶ್ರೀ ಪುರಂದರ ವಿಠಲನ ನೆನೆಯುತ |
| ನಾನೊಂದು ಮೂಲೇಲಿ ಒರಗಬೇಕಕ್ಕ ‖ 3 ‖ | ಮಿಡಿಗೊಂಡು ಮೂಲೆಗೆ ಒರಗಬೇಕು |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು**:

ಬಾಳಿನ ಗುಟ್ಟನ್ನು ಬಲ್ಲ ಪುರಂದರ ದಾಸರು ಈ ಹಾಡಿನಲ್ಲಿ ಮುಪ್ಪಿನ ಗಂಡನನ್ನು ಮಾಡಿಕೊಂಡ ತರುಣ ಸ್ತ್ರೀಯ ಕಳವಳವನ್ನು ಪ್ರಕಟಿಸಿದ್ದಾರೆ.

**ಪಡಿಪಾಟ** = ಕಷ್ಟ, ದುರ್ದೆಸೆ
**ಜಾಡಿ** = ಉರುಟು ನೂಲಿನಿಂದ ಮಾಡಿದ ಹಾಸುವ ಸಾಧನ
**ಮಿಡಿಗೊಂಡು** = ಮುದ್ದೆಯಾಗಿ

**Classification:** Keerthane
**Ankita:** purandara vittala
**Location:** NA
**Category:** Jeevana Darshana, Samsara Jigupse
**Sub-Category:** pati, beligge, niru, kannu, hAsige, srinidhi,
**Pravachana:** NA
**Explanation:** NA